# ಲೇಖಕಿಯರ ಸಂಘದ ಅಧ್ಯಕ್ಷಗಿರಿಗೆ ಸಚಿವ ಸ್ಥಾನಮಾನ ಕೇಳುವುದಿಲ್ಲ...



**ಹಿರಿಯ ಕವಯಿತ್ರಿ ಎಚ್.ಎಲ್. ಪುಷ್ಪ ಈಗ 'ಕರ್ನಾಟಕ ಲೇಖಕಿಯರ ಸಂಘ'ದ ಸಾರಥಿ. ಅಧ್ಯಕ್ಷರಾಗಿ 'ಕಲೇಸಂ' ಮುನ್ನಡೆಸುವಲ್ಲಿ ಅವರ ಕನಸುಗಳೇನು? ಮುಂದಿರುವ ಸವಾಲುಗಳೇನು?**

■ ರಾಘವೇಂದ್ರ ಕೆ. ತೊಗರ್ಸಿ

**◆ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷರಾಗಿ ನಿಮ್ಮ ಗುರಿಗಳು ಏನು?**

ಸಂಘದ ಘನತೆ, ಉದ್ದೇಶಕ್ಕೆ ತಕ್ಕಂತೆ ಕೆಲಸ ರೂಪಿಸಿಕೊಳ್ಳಬೇಕು. ಮಹಿಳಾ ಸಾಹಿತ್ಯದ ಸೈದ್ಧಾಂತಿಕ ಪರಿಕಲ್ಪನೆಯನ್ನು ಕಾಪಾಡಬೇಕು. ಕಾಲ–ಕೊರೊನಾ ಕಾರಣಕ್ಕೆ ಸಂಘದ ಕೆಲಸ ಸ್ಥಗಿತಗೊಂಡಿತ್ತು. ಈಗ ಆ ಚಟುವಟಿಕೆಗಳಿಗೆ ಆರಂಭದ ಹುಮ್ಮಸ್ಸನ್ನು ತುಂಬಬೇಕು. ಪ್ರಾದೇಶಿಕವಾಗಿ ಚುದುರಿಹೋಗಿರುವ ಪ್ರತಿಭೆಗಳಿಗೆ ವೇದಿಕೆಯನ್ನು ಕಲ್ಪಿಸುವ ವ್ಯವಸ್ಥೆ ಆಗಬೇಕು. ಸಮ್ಮೇಳನಗಳು ಬಹುತೇಕ ಬೆಂಗಳೂರು ಕೇಂದ್ರಿತವಾಗಿ ನಡೆಯುತ್ತಿವೆ. ಅವುಗಳನ್ನು ಜಿಲ್ಲಾ ಕೇಂದ್ರಗಳಿಗೆ ತೆಗೆದುಕೊಂಡು ಹೋಗಬೇಕಿದೆ. ಹೊಸ ಪ್ರತಿಭೆಗಳನ್ನು ಸಂಘ ಒಳಗೊಳ್ಳುವ ಅಗತ್ಯ ಇದೆ. ಹೊಸ ಬರಹಗಾರರ ಮೂಲಕ ಸಂಘಕ್ಕೆ ಆಧುನಿಕ ಸ್ಪರ್ಶ ಸಿಗುವ ನಿರೀಕ್ಷೆ ಇದೆ. 'ಗಡಿನಾಡು ಮಹಿಳಾ ಉತ್ಸವ' ಮಾಡುವ ಆಸೆಯೂ ಇದೆ. ಮಹಿಳಾ ಸಾಹಿತ್ಯ ಚರಿತ್ರೆಯನ್ನು ನಿಖರ ಮತ್ತು ವಿಸ್ತಾರವಾಗಿ ದಾಖಲಿಸಬೇಕು. 'ಕನ್ನಡ ಸಾಹಿತ್ಯ ಪರಿಷತ್ತು' ಮಹಿಳಾ ಸಾಹಿತ್ಯವನ್ನು ಗುರುತಿಸುವ ಕೆಲಸ ಮಾಡಿದೆ. ಅದನ್ನೇ ಇನ್ನೂ ವಿಸ್ತೃತಗೊಳಿಸಿ ಸೈದ್ಧಾಂತಿಕವಾಗಿ ರೂಪಿಸಬೇಕಿದೆ. ಆರಂಭದಿಂದ ಇದುವರೆಗಿನ ಮಹಿಳಾ ಸಾಹಿತ್ಯ ಸಾಗಿಬಂದ ಹಾದಿಯನ್ನು ಗುರುತಿಸಬೇಕಾಗಿದೆ.

ಮಹಿಳೆ ಆರಂಭದಲ್ಲಿ ಬರಹವನ್ನೂ ಒಂದು ಚೌಕಟ್ಟಿನಲ್ಲಿ ಮಾಡಬೇಕಿತ್ತು. ಈಗ ಆಕೆ ಅಂತಹ ಚೌಕಟ್ಟನ್ನು ಮೀರಿ ಜಾಗತಿಕವಾಗಿ ಬೆಳೆದಿದ್ದಾಳೆ. ಆದರೆ, ಒಂದು ರೀತಿಯಲ್ಲಿ ಮಹಿಳಾಸಾಹಿತ್ಯ ಉಪೇಕ್ಷೆಗೆ ಒಳಗಾಗಿದೆ. ಕೆಲವರೇ ಓದುವ, ಇಲ್ಲವೇ ಪರಾಮರ್ಶೆಗೆ ಬಳಸುವ ಸಾಹಿತ್ಯ ಎನ್ನುವಂತಾಗಿದೆ. ಅದು ತಪ್ಪಬೇಕು, ಸಾಹಿತ್ಯದ ಪ್ರಧಾನ ಚಿಂತನಾ ವಲಯದಲ್ಲಿ ಮಹಿಳಾ ಸಾಹಿತ್ಯವೂ ಸ್ಥಿರಗೊಳ್ಳಬೇಕು. ನಮ್ಮ ಸಂಘಕ್ಕೆ ಕಟ್ಟಡದ ಸಮಸ್ಯೆಯಿದೆ. ಒಂದೇ ರೂಮಿನ ಸಣ್ಣ ಅಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡುತ್ತಿದೆ. ಸುಸಜ್ಜಿತ ಕಟ್ಟಡ ಮತ್ತು ಗ್ರಂಥಾಲಯವನ್ನು ನಿರ್ಮಿಸಿಕೊಳ್ಳುವ ಅಗತ್ಯ ಇದೆ. ಅದಕ್ಕೆ ನಿವೇಶನವನ್ನು ಸರ್ಕಾರದಿಂದ ಪಡೆಯಲು ಸಾಧ್ಯವೆ ಎಂದು ಯೋಚಿಸಬೇಕು. ಬೈಲಾದಲ್ಲಿಯೂ ಕೆಲವೊಂದು ತಿದ್ದುಪಡಿಗಳನ್ನು ಮಾಡಬೇಕಿದೆ. ಚುನಾವಣೆಯ ಸ್ವರೂಪ ಮತ್ತು ಕಾಲಾವಧಿ ಸ್ಪಷ್ಟವಾಗಿ ನಿಗದಿ ಮಾಡಬೇಕು. ಹಿರಿಯ ಲೇಖಕರು, ಮಾಜಿ ಪದಾಧಿಕಾರಿಗಳ ಸಮ್ಮುಖದಲ್ಲಿ ಇದಕ್ಕೊಂದು ಸ್ಪಷ್ಟ ರೂಪ ನೀಡುವ ಉದ್ದೇಶವಿದೆ

**◆ ಪುರುಷರನ್ನು ದೂರವಿಟ್ಟು ಸಾಹಿತ್ಯ ಸಂಘಟನೆ ರೂಪಿಸುವ ಅಗತ್ಯ ಇದೆಯೇ?**

ಯಾವುದೇ ಸಂಘಟನೆ ಆರಂಭದಲ್ಲಿ ಮಿತಿಯನ್ನು ಹೊಂದಿರುತ್ತದೆ. ಹೊರಜಗತ್ತಿಗೆ ತೆರೆದುಕೊಳ್ಳುತ್ತಾ ಆ ಮಿತಿಗಳನ್ನು ಮೀರಿ ಹೊಸತನ್ನು ಒಳಗೊಳ್ಳಬೇಕಾಗುತ್ತದೆ. ಆರಂಭದಲ್ಲಿ ಈ ರೀತಿಯ ಯೋಚನೆ ಅನಿವಾರ್ಯವಾಗಿತ್ತು. ನನಗೆ ಗೊತ್ತಿರುವಂತೆ ಲೀಲಾದೇವಿ ಆರ್. ಪ್ರಸಾದ್ ಮತ್ತು ಟಿ. ಸುನಂದಮ್ಮ ಅವರು ಯಾವುದೋ ಕಾರ್ಯಕ್ರಮಕ್ಕೆ ಹೋದಾಗ ಈ ಬಗ್ಗೆ ಚರ್ಚಿಸಿದ್ದರಂತೆ. ಮಹಿಳೆಯರಿಗೆ ತಮ್ಮದೇ ಆದ ಅಸ್ತಿತ್ವವನ್ನು ಗುರುತಿಸಿಕೊಳ್ಳಲು ಒಂದು ಸಂಸ್ಥೆ ಬೇಕು. ಪುರುಷರೇ ಎಲ್ಲ ವೇದಿಕೆಯನ್ನು ಬಳಸುತ್ತಿದ್ದಾರೆ. ಮಹಿಳೆಯರಿಗೆ ಸಾಹಿತ್ಯಿಕವಾಗಿ ಸೂಕ್ತ